ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | | | | |
|---|---|---|---|---|
| | ಸಿಸಿ ನಂ. 168/2020 | | | |
| | ಸಿ.ಡಬ್ಲೂಃ | 7 | ಪಿ.ಡಬ್ಲೂಃ | 2 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 18.07.2024 | | | |
| ಸಾಕ್ಷಿದಾರರ ಹೆಸರುಃ | ವೀರಪ್ಪ ತಂದೆ ವೆಂಕಪ್ಪ ವಾಸಣ್ಣವರ | | | |
| ವಯಸ್ಸುಃ | 54 ವರ್ಷ, | | | |
| ಉದ್ಯೋಗಃ | ವ್ಯವಸಾಯ | | | |
| ವಾಸಸ್ಥಳಃ | ಕವಲೂರು | | | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

1. ನನಗೆ ಚಾಸಾ 1, 4 ರಿಂದ 6 ರವರ ಪರಿಚಯ ಇದ್ದು, ಅವರು ನನ್ನ ಸಂಬಂಧಿಕರು ಇರುತ್ತಾರೆ. ಈಗ ನನಗೆ ತೋರಿಸಿದ ದಾಖಲೆ ದೂರು ಆಗಿದ್ದು, ಅದರಲ್ಲಿ ದಸ್ತುರು ಅಂತಾ ಇರುವ ಸಹಿ ನನ್ನದೇ ಇರುತ್ತದೆ. ಸದರಿ ದಾಖಲೆಯನ್ನು ನಿಪಿ 1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

2. ದಿಃ 17.03.2020 ರಂದು ಮಧ್ಯಾಹ್ನ 3.45 ಗಂಟೆಗೆ ಮುಂಡರಗಿ ಪೋಲಿಸ್ ಠಾಣೆಯಲ್ಲಿ ಚಾಸಾ 1 ರವರು, ಆರೋಪಿತರು ಹೊಲದಲ್ಲಿ ದಿಃ 04.03.2020 ರಂದು ರಾತ್ರಿ 11 ಗಂಟೆಗೆ ಸರ್ವೇ ನಂ.4/5 ಆಸ್ತಿಯಲ್ಲಿ ಕೊಡಲಿ ಕಾವಿನಿಂದ ಹೊಡೆದ ಕುರಿತು ಹೇಳಿದ್ದರ ಮೇರೆಗೆ ನಿಪಿ 1 ರಂತೆ ನಾನು ಫಿರ್ಯಾದಿ ಬರೆದಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಜಿ.ಜಿ.ಐ ವಕೀಲರವರಿಂದಃ**

1. ನಾನು ವ್ಯವಸಾಯದೊಂದಿಗೆ ಪಂಚಾಯ್ತಿಯಲ್ಲಿ ಮಾಜಿ ಚೇರ್ ಮನ್ ಅಂತಾ ಕೆಲಸ ಮಾಡಿದ್ದೇನೆ. ಆರೋಪಿತರು ಮತ್ತು ಚಾಸಾ 1 ನನ್ನ ಸಂಬಂಧಿಕರು ಎಂದರೆ ಸರಿ. ಆರೋಪಿತರ ಮತ್ತು ಚಾಸಾ 1 ರವರ ನಡುವೆ ರಿ ಸ ನಂ.2/4 ರ ಜಮೀನಿನ ಕುರಿತು ವ್ಯಾಜ್ಯ ಇತ್ತು ಎಂದರೆ ಸರಿ. ಸದರಿ ಆಸ್ತಿಯು ಚಾಸಾ 1 ರವರ ಹೆಂಡತಿಯ ತಾಯಿ ಉಡಚವ್ವರದ್ದು ಎಂದರೆ ಸರಿ. ಸದರಿ ಉಡಚವ್ವ ತನ್ನ ಜೀವಿತಾವಧಿಯಲ್ಲಿ 1 ನೇ ಆರೋಪಿ ಮತ್ತು ಆತನ ತಮ್ಮನ ಹೆಸರಿಗೆ ಬರೆದುಕೊಟ್ಟಿದ್ದರ ಮೇರೆಗೆ ಉತಾರವಾಗಿದ್ದವು ಎಂದರೆ ಸರಿ. ಉಡಚವ್ವ ಜೀವಂತ ಇದ್ದಾಗಲೂ ಚಾಸಾ 1 ರವರು ಆರೋಪಿತರ ಮನೆಗೆ ಹೋಗಿ ಜಗಳ ಮಾಡುತ್ತಿದ್ದರು ಎಂದರೆ ಸರಿ. ಈ ಕುರಿತು ನಾವು ಚಾಸಾ 1 ರವರಿಗೆ ಬುದ್ಧಿವಾದ ಹೇಳಿದ್ದೆವು ಎಂದರೆ ಸರಿ.

2. ನಿಪಿ 1 ರ ಫಿರ್ಯಾದಿಯನ್ನು ಪೋಲಿಸ್ ಠಾಣೆಯ ಆವರಣದಲ್ಲೇ ಬರೆದಿರುತ್ತೇನೆ. ಸದರಿ ಕಾಲಕ್ಕೆ ಚಾಸಾ 1, 5 ಹಾಗೂ ದ್ಯಾಮಣ್ಣ ಅಂತಾ ಒಬ್ಬ ವ್ಯಕ್ತಿ ಹಾಜರಿದ್ದರು. ಚಾಸಾ 5 ನನಗೆ ಮಾಹಿತಿ ನೀಡಿರುವುದಿಲ್ಲ. ನಿಪಿ 1 ರ ಫಿರ್ಯಾದಿಯನ್ನು ದಾಖಲಿಸಲು ವಿಳಂಬವಾದ ಕಾರಣವನ್ನು ಚಾಸಾ 1 ರವರು ನನಗೆ ತಿಳಿಸಿದ್ದರು.

13 ದಿನ ವಿಳಂಬವಾಗಿತ್ತು. ಸದರಿ ದೂರು ತಡವಾಗಿ ದಾಖಲಿಸಿದ ಕಾರಣವನ್ನು ನಿಪಿ 1 ರಲ್ಲಿ ಬರೆದಿರುವುದಿಲ್ಲ. ನಿಪಿ 1 ನ್ನು ಪೋಲಿಸರಿಗೆ ಚಾಸಾ 1 ರವರು ನೀಡಿದ್ದರು. ಆ ಕಾಲಕ್ಕೆ ನಾನು ಹಾಜರಿದ್ದೆನು. ಪೋಲಿಸರು ದೂರು ದಾಖಲಿಸಲು ವಿಳಂಬವಾದ ಕುರಿತು ತನಿಖೆ ಮಾಡಿರಲಿಲ್ಲ. ನಿಪಿ 1 ನ್ನು ಠಾಣೆಯಲ್ಲಿ ಸಲ್ಲಿಸುವಾಗ ಸಮಯ 4.00 ಗಂಟೆಯಾಗಿತ್ತು. ನಿಪಿ 1 ಬರೆಯುವ ಕಾಲಕ್ಕೆ ಚಾಸಾ 1, 5 ಹಾಗೂ ದ್ಯಾಮಪ್ಪ ಹಾಜರಿದ್ದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸಾ 1 ನನಗೆ ದೊಡ್ಡಪ್ಪನಾಗುವುದರಿಂದ, ಘಟನೆ ನಡೆಯದೇ ಇದ್ದರೂ, ಚಾಸಾ 1 ಮತ್ತು 5 ರವರ ಮಾತು ಕೇಳಿ ಕೊಂಡು, ಆರೋಪಿತರ ಜಮೀನನ್ನು ಪಡೆಯುವ ಉದ್ದೇಶ ಹೊಂದಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಜೆಎಂಎಫ್‌ಸಿ ಮುಂಡರಗಿ.

ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | | | | |
|---|---|---|---|---|
| | ಸಿಸಿ ನಂ. 168/2020 | | | |
| | ಪಿ.ಡಬ್ಲೂ: | | ಸಿಡಬ್ಲೂ: | |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 18.07.2024 | | | |
| ಸಾಕ್ಷಿದಾರರ ಹೆಸರುಃ | ನಾಗವ್ವ ಹನಮಪ್ಪ ಶಿಣಿ | | | |
| ವಯಸ್ಸುಃ | 45 ವರ್ಷ | | | |
| ಉದ್ಯೋಗಃ | ಮನೆಗೆಲಸ | | | |
| ವಾಸಸ್ಥಳಃ | ಮುಂಡವಾಡ | | | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

1. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಸಂಬಂಧಿಕರು. ಚಾಸಾ 1 ನನ್ನ ತಂದೆ, ಚಾಸಾ 4 ಮತ್ತು 6 ನನ್ನ ಸಂಬಂಧಿಕರು ಇರುತ್ತಾರೆ. ಮುಂಡವಾಡದಲ್ಲಿ ನಮ್ಮ ಜಮೀನು ಇದ್ದು, ಸದರಿ ಜಮೀನಿನ ಕುರಿತು ಚಾಸಾ 1 ಮತ್ತು ಆರೋಪಿತರ ನಡುವೆ ದಾರಿಯ ಕುರಿತು ಆಗಾಗ ಜಗಳ ಆಗುತ್ತಿತ್ತು. ಮಾರ್ಚ್-2020 ರಲ್ಲಿ ರಾತ್ರಿ 11 ಗಂಟೆ ಸುಮಾರಿಗೆ ನಾನು, ಚಾಸಾ 1, 4 ಮತ್ತು 6 ರವರು ಆರೋಪಿತರು ಮಾಡಿದ ದಾರಿಯನ್ನು ಮುಚ್ಚುತ್ತಿದ್ದಾಗ, ಆರೋಪಿತರಿಬ್ಬರು ಅಲ್ಲಿಗೆ ಬಂದು, ಚಾಸಾ 1 ರವರನ್ನು ಮೊದಲಿಗೆ ಕೈಯಿಂದ ಹೊಡೆದು, 1 ನೇ ಆರೋಪಿ ಕಟ್ಟಿಗೆಯಿಂದ ಮತ್ತು 2 ನೇ ಆರೋಪಿ ಕೊಡಲಿಯಿಂದ ಚಾಸಾ 1 ರವರ ತಲೆಗೆ ಹೊಡೆದರು. ಆಗ ಅವರಿಗೆ ತೀವ್ರ ರಕ್ತ ಗಾಯವಾಗಿದ್ದು ಆಗ ಚಾಸಾ 4 ಮತ್ತು 6 ರವರು ಜಗಳವನ್ನು ಬಿಡಿಸಿ, ಆ್ಯಂಬುಲೆನ್ಸಗೆ ಕರೆ ಮಾಡಿ, ಕರೆಸಿ, ಚಾಸಾ 1 ರವರನ್ನು ಮುಂಡರಗಿಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು. ಮುಂದೆ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಗದಗನ ಸರ್ಕಾರಿ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದರು.

2. ಚಾಸಾ 1 ರವರು ಈ ಕುರಿತು ಆರೋಪಿತರ ವಿರುದ್ಧ ದೂರು ದಾಖಲಿಸಿದ್ದರು. ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಮಾನ್ಯ ಎಪಿಪಿ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಜೆಎಂಎಫ್‌ಸಿ ಮುಂಡರಗಿ.